# ಕರ್ನಾಟಕ ಲೋಕಾಯುಕ್ತ

ಸಂ.ಕಂಪ್ಲೆಂಟ್/ಉಪಲೋಕ್/ಎಮ್‌ವೈಎಸ್/2325/2021
ಪಿಒ/ಎ.ಆರ್.ಇ-2 (ಮಂಡನಾಧಿಕಾರಿಗಳ ಶಾಖೆ)

ಬಹುಮಹಡಿಗಳ ಕಟ್ಟಡ,
ಡಾ|| ಬಿ.ಆರ್.ಅಂಬೇಡ್ಕರ ರಸ್ತೆ,
ಬೆಂಗಳೂರು, ದಿನಾಂಕ:09/02/2022.

14

## ಕರ್ನಾಟಕ ಲೋಕಾಯುಕ್ತ ಕಾಯಿದೆ 1984ರ ಕಲಂ 12(3)ರ ಅನ್ವಯ ವರದಿ

ವಿಷಯ: ಸರ್ಕಾರಿ ನೌಕರರಾದ **ಶ್ರೀ. ಹೆಚ್. ಹನುಮಂತಯ್ಯ, ಬಿನ್ ಲೇಟ್ ಹನುಮಂತಯ್ಯ, ಕಾರ್ಯಪಾಲಕ ಅಭಿಯಂತರರು, ಪಂಚಾಯತ್ ರಾಜ್ ಇಂಜನಿಯರ್‌ರವರ ವಿಭಾಗ, ಚಿಕ್ಕಮಗಳೂರು ಜಿಲ್ಲೆ,** ರವರು ಕರ್ತವ್ಯ ಲೋಪ/ದುರ್ನಡತೆ ಎಸಗಿರುವ ಬಗ್ಗೆ.

1. ಪೋಲಿಸ್ ಅಧೀಕ್ಷಕರು ಭ್ರಷ್ಟಾಚಾರ ನಿಗ್ರಹ ದಳ, ಪಶ್ಚಿಮ ವಲಯ, ಮಂಗಳೂರು, ಇವರು ಪೋಲಿಸ್ ನಿರೀಕ್ಷಕರು, ಭ್ರಷ್ಟಾಚಾರ ನಿಗ್ರಹ ದಳ, ಚಿಕ್ಕಮಗಳೂರು, (ಇನ್ನು ಮುಂದೆ ತನಿಖಾಧಿಕಾರಿ ಎಂದು ಕರೆಯಲ್ಪಡುತ್ತಾರೆ), ಇವರ ತನಿಖಾ ವರದಿ ಮತ್ತು ಸಂಬಂಧಿಸಿದ ದಾಖಲೆಗಳೊಂದಿಗೆ ವರದಿಯನ್ನು ಸಲ್ಲಿಸಿದ್ದು, ಸದರಿ ವರದಿಯಲ್ಲಿ **ಶ್ರೀ. ಹೆಚ್. ಹನುಮಂತಯ್ಯ, ಬಿನ್ ಲೇಟ್ ಹನುಮಂತಯ್ಯ, ಕಾರ್ಯಪಾಲಕ ಅಭಿಯಂತರರು, ಪಂಚಾಯತ್ ರಾಜ್ ಇಂಜನಿಯರ್‌ರವರ ವಿಭಾಗ, ಚಿಕ್ಕಮಗಳೂರು ಜಿಲ್ಲೆ,** (ಇನ್ನು ಮುಂದೆ ಎದುರುದಾರರು ಎಂದು ಕರೆಯಲ್ಪಡುತ್ತಾರೆ), ಇವರು **ಶ್ರೀ. ಸತೀಶ್ ಸಿ. ಬಿನ್ ಚಂದ್ರೇಗೌಡ, ಕೃಷಿ ಮತ್ತು ಸಿವಿಲ್ ಕಾಂಟ್ರಾಕ್ಟರ್, ಸ್ಥಿರೂರು ಗ್ರಾಮ, ಹೆರೂರು ಅಂಚೆ, ಕೊಪ್ಪ ತಾಲ್ಲೂಕು, ಚಿಕ್ಕಮಗಳೂರು ಜಿಲ್ಲೆ,** (ಇನ್ನು ಮುಂದೆ ದೂರುದಾರರು ಎಂದು ಕರೆಯಲ್ಪಡುತ್ತಾರೆ), ರವರಿಂದ ಸರ್ಕಾರಿ ಕೆಲಸಕ್ಕೆ ಲಂಚದ ಹಣಕ್ಕೆ ಬೇಡಿಕೆ ಇಟ್ಟು ಕರ್ತವ್ಯ ಲೋಪವೆಸಗಿರುವುದು ಮೇಲ್ನೋಟಕ್ಕೆ ಕಂಡು ಬಂದಿದ್ದರಿಂದ ಕರ್ನಾಟಕ ಲೋಕಾಯುಕ್ತ ಕಾಯ್ದೆ 1984 ರ ಕಲಂ 7 (2) ರನ್ವಯ ಗೌರವಾನ್ವಿತ ಉಪಲೋಕಾಯುಕ್ತರು ಸ್ವಯಂ ಪ್ರೇರಿತ ದೂರು ದಾಖಲಿಸಿಕೊಂಡು ತನಿಖೆ ತೆಗೆದುಕೊಂಡಿರುತ್ತಾರೆ. ಚಿಕ್ಕಮಗಳೂರು ಎ.ಸಿ.ಬಿ ಪೋಲಿಸ್ ಠಾಣೆ ಮೊಕದ್ದಮೆ **ಸಂ:02/2019** ರಲ್ಲಿಯ ದಾಖಲೆಗಳನ್ನು ಮತ್ತು ವಿವರಗಳನ್ನು ಪರಿಗಣಿಸಲಾಗಿ ಈ ಕೆಳಗೆ ಹೇಳಿದ ಸಂಗತಿಗಳು ಮೇಲ್ನೋಟಕ್ಕೆ ಕಂಡು ಬರುತ್ತದೆ.

i. ದೂರುದಾರರು ಕ್ಲಾಸ್-3 ಲೈಸನ್ಸ್ ಸಿವಿಲ್ ಕಾಂಟ್ರಾಕ್ಟರ್ ಆಗಿದ್ದು, ಇವರು 2019ನೇ ಸಾಲಿನಲ್ಲಿ ಕೊಪ್ಪ ತಾಲ್ಲೂಕು ವ್ಯಾಪ್ತಿಯಲ್ಲಿ ಬರುವ ಕುಂಭರಕೊಡಿಗೆ ಗ್ರಾಮದ ರಸ್ತೆಯನ್ನು ಎಂಟು ಲಕ್ಷ ರೂ.ಗಳಿಗೆ, ದೂಬಳ ಗ್ರಾಮದ ರಸ್ತೆಯನ್ನು ಐದು ಲಕ್ಷ ರೂ.ಗಳಿಗೆ, ಮತ್ತೊಂದು ಕುಂಭರಕೊಡಿಗೆ ಗ್ರಾಮದ ರಸ್ತೆಯನ್ನು ಮೂರು ಲಕ್ಷ ರೂ.ಗಳಿಗೆ, ಜಿಲ್ಲಾ ಪಂಚಾಯಿತಿಯಿಂದ ಕೆಲಸಗಳನ್ನು ಗುತ್ತಿಗೆ ಪಡೆದು ಕೆಲಸ ನಿರ್ವಹಿಸಿ ಪೂರ್ಣಗೊಳಿಸಿರುತ್ತಾರೆ. ದೂರುದಾರರಿಗೆ ಸಂಬಂಧಿಸಿದಂತೆ ರಸ್ತೆ

ಕಾಮಗಾರಿ ಕೆಲಸದ ಬಾಬ್ತು ಬಿಲ್ಲಿನ ಹಣವನ್ನು ಮಂಜೂರು ಮಾಡುವುದು ಎದುರುದಾರರ ಕರ್ತವ್ಯವಾಗಿರುತ್ತದೆ. ದಿನಾಂಕ:08/05/2019ರಂದು ದೂರುದಾರರು ಅವರ ಸ್ನೇಹಿತರಾದ ಸುಕುಮಾರ್‌ರವರೊಂದಿಗೆ ಎದುರುದಾರರ ಕಚೇರಿಗೆ ಹೋಗಿ, ಕೊಪ್ಪ ತಾಲ್ಲೂಕಿನ ಕುಂಭರಕೊಡಿಗೆ ಮತ್ತು ದೂಬಳ ಗ್ರಾಮದ ರಸ್ತೆ ಕಾಮಗಾರಿಗೆ ಸಂಬಂಧಿಸಿದ ಬಿಲ್ ಮಂಜೂರಾತಿ ಬಗ್ಗೆ ಎದುರುದಾರರನ್ನು ಕೇಳಿದಾಗ, ಎದುರುದಾರರು ಶೇಕಡಾ 2.50ರಂತೆ ಒಟ್ಟು 20,000/- ರೂ.ಗಳ ಲಂಚದ ಹಣಕ್ಕೆ ಬೇಡಿಕೆ ಇಟ್ಟಿರುತ್ತಾರೆ. ಆಗ ದೂರುದಾರರು 10,000/- ರೂ.ಗಳನ್ನು ಎದುರುದಾರರಿಗೆ ನೀಡಿ ಉಳಿದ 10,000/- ರೂ.ಗಳನ್ನು ಹೊಂದಿಸಿಕೊಂಡು ಬರುವುದಾಗಿ ಹೇಳಿ ವಾಪಸ್ಸು ಬಂದಿರುತ್ತಾರೆ. ಎದುರುದಾರರು ಲಂಚದ ಹಣಕ್ಕೆ ಬೇಡಿಕೆ ಇಟ್ಟು ಮಾತನಾಡಿದ ಸದರಿ ಸಂಭಾಷಣೆಯನ್ನು ದೂರುದಾರರ ಸ್ನೇಹಿತ ಸುಕುಮಾರ್‌ರವರ ಮೊಬೈಲ್‌ನಲ್ಲಿ ರೆಕಾರ್ಡ್ ಮಾಡಿಕೊಂಡಿರುತ್ತಾರೆ.

ii. ನಂತರ ಅದೇ ದಿನ, ಅಂದರೆ ದಿನಾಂಕ: 08/05/2019ರಂದು ದೂರುದಾರರಿಗೆ ಲಂಚದ ಹಣ ಕೊಡಲು ಇಷ್ಟವಿಲ್ಲದ ಕಾರಣ ಮಧ್ಯಾಹ್ನ 02-30 ಗಂಟೆಗೆ ತನಿಖಾಧಿಕಾರಿಗಳನ್ನು ಭೇಟಿಮಾಡಿ ದೂರು ನೀಡಿದ್ದು, ಅದರ ಆಧಾರದ ಮೇಲೆ ಚಿಕ್ಕಮಗಳೂರು ಎಸಿಬಿ ಪೋಲಿಸ್ ಠಾಣೆ ಮೊ. ಸಂ. 02/2019 ರಲ್ಲಿ ಕಲಂ 7, (ಎ) ರ ಭ್ರಷ್ಟಾಚಾರ ನಿಗ್ರಹ ಕಾಯ್ದೆ 1988ರ (ತಿದ್ದುಪಡಿ) ಅಡಿ ಪ್ರಕರಣ ದಾಖಲಿಸಿರುತ್ತಾರೆ.

iii. ಪ್ರಕರಣ ದಾಖಲಾದ ನಂತರ ತನಿಖಾಧಿಕಾರಿಗಳು ಸರ್ಕಾರಿ ಪಂಚರುಗಳಾದ 1) ಶ್ರೀ. ಬಸವರಾಜಪ್ಪ ಡಿ. (ನೆರಳು ಸಾಕ್ಷಿ) 2) ಶ್ರೀ ವಿಜಯಕುಮಾರ್, ಇವರುಗಳನ್ನು ಬರಮಾಡಿಕೊಂಡಿದ್ದು, ಅವರುಗಳ ಪರಿಚಯವನ್ನು ಮಾಡಿಕೊಂಡು ಹಾಗೂ ದೂರುದಾರರಿಗೆ ಪರಿಚಯ ಮಾಡಿಸಿ, ದೂರಿನ ವಿಷಯವನ್ನು ಪಂಚರಿಗೆ ತಿಳಿಸಿ, ದೂರಿನ ಪ್ರತಿಯನ್ನು ನೀಡಿದ್ದು, ಅದನ್ನು ಓದಿ ತಿಳಿದುಕೊಳ್ಳಲು ಹೇಳಿದಂತೆ, ಪಂಚರುಗಳು ದೂರಿನಲ್ಲಿಯ ವಿಷಯವನ್ನು ಓದಿ ತಿಳಿದುಕೊಂಡಿರುತ್ತಾರೆ ಹಾಗೂ ದೂರುದಾರರಿಂದ ಕೇಳಿ ಖಾತ್ರಿಪಡಿಸಿಕೊಂಡಿರುತ್ತಾರೆ. ಲಂಚದ ಹಣಕ್ಕೆ ಎದುರುದಾರರು ಒತ್ತಾಯ ಮಾಡಿದ ಸಂಭಾಷಣೆಗಳನ್ನು ದೂರುದಾರರು ತಮ್ಮ ಸ್ನೇಹಿತ ಸುಕುಮಾರ್‌ರವರ ಮೊಬೈಲ್‌ನಲ್ಲಿ ರೆಕಾರ್ಡ್ ಮಾಡಿಕೊಂಡಿದ್ದನ್ನು ಹಾಜರುಪಡಿಸಿದ್ದು, ತನಿಖಾಧಿಕಾರಿಗಳು ಸದರಿ ಸಂಭಾಷಣೆಗಳನ್ನು ಕಂಪ್ಯೂಟರ್‌ನಲ್ಲಿ ಹಾಕಿ ಪಂಚರಿಗೆ ಕೇಳಿಸಿದ್ದು, ಸದರಿ ಸಂಭಾಷಣೆಯಲ್ಲಿ ಎದುರುದಾರರು ಲಂಚದ ಹಣಕ್ಕೆ ಬೇಡಿಕೆ ಇಟ್ಟಿದ್ದು, ಅವರ ಧ್ವನಿಯನ್ನು ದೂರುದಾರರು ಗುರುತಿಸಿರುತ್ತಾರೆ. ತನಿಖಾಧಿಕಾರಿಗಳು ಸಂಭಾಷಣೆಯನ್ನು ಕಂಪ್ಯೂಟರ್‌ನಲ್ಲಿ ಲಿಪಿಕರಣ ಮಾಡಿಸಿರುತ್ತಾರೆ ಹಾಗೂ ಸಿಡಿಗೆ ವರ್ಗಾಯಿಸಿ ಕಂಪ್ಯೂಟರ್ ಮೂಲಕ ಪಂಚರಿಗೆ ಕೇಳಿಸಿದ್ದು, ನಂತರ ಸದರಿ ಸಿಡಿಯನ್ನು ಅಮಾನತ್ತು ಪಡಿಸಿಕೊಂಡಿರುತ್ತಾರೆ. ನಂತರ ದೂರುದಾರರು ಲಂಚ ನೀಡಲು ತಂದ (ರೂ.2,000/- ಮುಖಬೆಲೆಯ

01–ನೋಟು ಮತ್ತು ರೂ. 500/– ಮುಖಬೆಲೆಯ 16–ನೋಟುಗಳು) ಒಟ್ಟು 10,000/– ರೂ.ಗಳನ್ನು ದೂರುದಾರರು ತನಿಖಾಧಿಕಾರಿಗಳ ಮುಂದೆ ಹಾಜರು ಪಡಿಸಿದ್ದು, ಅವರ ಸೂಚನೆಯಂತೆ ಪಂಚರು ಸದರಿ ನೋಟುಗಳನ್ನು ಪರಿಶೀಲನೆ ಮಾಡಿ, ಪಂಚ–ವಿಜಯಕುಮಾರ್ ರವರು ಸದರಿ ನೋಟುಗಳ ನಂ. ಮತ್ತು ಮೌಲ್ಯವನ್ನು ಬಿಳಿಹಾಳೆಯಲ್ಲಿ ನಮೂದು ಮಾಡಿಕೊಂಡಿರುತ್ತಾರೆ. ಪೋಲೀಸ್ ಸಿಬ್ಬಂದಿ ಸದರಿ ನೋಟುಗಳಿಗೆ ಫಿನಾಫ್ತಲೀನ್ ಪೌಡರನ್ನು ಸವರಿದ್ದು, ನಂತರ ತನಿಖಾಧಿಕಾರಿಗಳ ಸೂಚನೆಯಂತೆ ಪಂಚ–2–ವಿಜಯಕುಮಾರ್‌ರವರು ಅಂಗ ಶೋಧನೆ ಮಾಡಿ, ನಂತರ ಫಿನಾಫ್ತಲೀನ್ ಪೌಡರನ್ನು ಸವರಿದ್ದ ನೋಟುಗಳನ್ನು ತೆಗೆದುಕೊಂಡು ಎಣಿಕೆ ಮಾಡಿ, ದೂರುದಾರರು ಧರಿಸಿದ್ದ ಶರ್ಟಿನ ಎಡಭಾಗದ ಜೇಬಿನಲ್ಲಿ ಇಟ್ಟಿರುತ್ತಾರೆ. ನಂತರ ತನಿಖಾಧಿಕಾರಿಗಳು ದೂರುದಾರರಿಗೆ ಹಣವನ್ನು ಅನಗತ್ಯವಾಗಿ ಮುಟ್ಟದಂತೆ, ಬೇರೆ ಯಾವುದಕ್ಕೂ ಬಳಸದಂತೆ ತಿಳಿಸಿ, ಎದುರುದಾರರು ಲಂಚದ ಹಣವನ್ನು ಕೇಳಿದಾಗ ಮಾತ್ರ ಕೊಡುವಂತೆ ಮತ್ತು ಲಂಚದ ಹಣವನ್ನು ಸ್ವೀಕರಿಸಿದ ನಂತರ ಹೊರಗಡೆ ಬಂದು ತನ್ನ ಕೈಯಿಂದ ತಲೆಯನ್ನು ಸವರಿಕೊಳ್ಳುವ ಮೂಲಕ ಸನ್ನೆ ನೀಡಬೇಕೆಂದು ತಿಳಿಸಿರುತ್ತಾರೆ. ನಂತರ ತನಿಖಾಧಿಕಾರಿಗಳು ಪಂಚ ಸಾಕ್ಷಿ–2ರವರ ಎರಡೂ ಕೈಗಳನ್ನು ಸೋಡಿಯಮ್ ಕಾರ್ಬೋನೇಟ್ ದ್ರಾವಣದಲ್ಲಿ ಪ್ರತ್ಯೇಕವಾಗಿ ತೊಳೆಸಲಾಗಿ, ದ್ರಾವಣವು ಗುಲಾಬಿ ಬಣ್ಣಕ್ಕೆ ತಿರುಗಿದ್ದು, ಫಿನಾಫ್ತಲೀನ್ ಪೌಡರನ ವೈಶಿಷ್ಟತೆಯನ್ನು ದೂರುದಾರರು ಹಾಗೂ ಪಂಚರಿಗೆ ಮನವರಿಕೆ ಮಾಡಿಕೊಟ್ಟಿರುತ್ತಾರೆ. ತನಿಖಾಧಿಕಾರಿಗಳು, ದೂರುದಾರರು ಹಾಗೂ ಸಿಬ್ಬಂದಿ ತಮ್ಮ ತಮ್ಮ ಕೈಗಳನ್ನು ಶುದ್ಧವಾಗಿ ನೀರಿನಲ್ಲಿ ಸೋಪಿನಿಂದ ತೊಳೆದಿರುತ್ತಾರೆ. ತನಿಖಾಧಿಕಾರಿಗಳು ದೂರುದಾರರಿಗೆ ವಾಯ್ಸ್ ರೆಕಾರ್ಡನ್ನು ಕೊಟ್ಟು, ಎದುರುದಾರರನ್ನು ಭೇಟಿ ಮಾಡಲು ಹೋಗುವಾಗ ಆನ್ ಮಾಡಿಕೊಂಡು ಹೋಗಿ ಸಂಭಾಷಣೆಯನ್ನು ರೆಕಾರ್ಡ್ ಮಾಡಿಕೊಳ್ಳಲು ತಿಳಿಸಿರುತ್ತಾರೆ. ನೆರಳು ಸಾಕ್ಷಿಯಾದ ಪಂಚ–1–ಬಸವರಾಜಪ್ಪರವರಿಗೆ ದೂರುದಾರರೊಂದಿಗೆ ಲಂಚವನ್ನು ನೀಡುವ ಕಾಲಕ್ಕೆ ನಡೆಯುವ ಸಂಭಾಷಣೆ ಹಾಗೂ ವಿದ್ಯಾಮಾನಗಳನ್ನು ಗಮನಿಸಬೇಕೆಂದು ಸೂಚನೆ ನೀಡಿರುತ್ತಾರೆ. ಈ ಎಲ್ಲಾ ಘಟನಾವಳಿಗಳನ್ನು ಫೋಟೋ ತೆಗೆದು ದಿನಾಂಕ: 08/05/2019ರಂದು ಮಧ್ಯಾಹ್ನ 03–30 ಗಂಟೆಯಿಂದ ಸಂಜೆ 05–20 ಗಂಟೆಯವರಿಗೆ ಚಿಕ್ಕಮಗಳೂರು ಎಸಿಬಿ ಕಚೇರಿಯಲ್ಲಿ ಪ್ರಾಯೋಗಿಕ ಪಂಚನಾಮೆಯನ್ನು ತಮ್ಮ ಸಿಬ್ಬಂದಿಗೆ ಉಕ್ತಲೇಖನ ನೀಡಿ ಕಂಪ್ಯೂಟರ್‌ನಲ್ಲಿ ಬೆರಳಚ್ಚು ಮಾಡಿಸಿರುತ್ತಾರೆ.

iv. ಅದೇ ದಿನ ಸಂಜೆ 05–30 ಗಂಟೆಗೆ ದೂರುದಾರರು, ತನಿಖಾಧಿಕಾರಿಗಳು, ತಮ್ಮ ಸಿಬ್ಬಂದಿ ಮತ್ತು ಪಂಚರೊಂದಿಗೆ ಚಿಕ್ಕಮಗಳೂರು ಎಸಿಬಿ ಕಚೇರಿಯಿಂದ ಇಲಾಖಾ ವಾಹನಗಳಲ್ಲಿ ಹೊರಟು ಸಂಜೆ 5–45 ಗಂಟೆಗೆ ಎದುರುದಾರರ ಕಚೇರಿಯ ಹತ್ತಿರ ಹೋಗಿ, ದೂರುದಾರರಿಗೆ ಹಾಗೂ ನೆರಳು ಸಾಕ್ಷಿ ಬಸವರಾಜಪ್ಪರವರಿಗೆ ಪ್ರಾಯೋಗಿಕ ಪಂಚನಾಮೆಯಲ್ಲಿ ನೀಡಿದ ಸೂಚನೆಯನ್ನು ಮತ್ತೊಮ್ಮೆ ನೆನಪಿಸಿ

ಎದುರುದಾರರನ್ನು ಭೇಟಿಮಾಡಲು ಕಳುಹಿಸಿ ಕೊಟ್ಟಿರುತ್ತಾರೆ. ಅದರಂತೆ ದೂರುದಾರರು ಪಂಚ–ಸಾಕ್ಷಿರವರೊಂದಿಗೆ ಎದುರುದಾರರ ಕಚೇರಿಗೆ ಬಂದಿದ್ದು, ಅಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದ ಎದುರುದಾರರನ್ನು ಭೇಟಿಯಾಗಿ, ತಮ್ಮ ಬಿಲ್ ಮಾಡಿಕೊಡಿ ಎಂದು ಕೇಳಿದ್ದು, ಆಗ ಎದುರುದಾರರು ದೂರುದಾರರಿಗೆ ಹಣ ಕೊಡಿ ಎಂದು ಕೇಳಿದಾಗ, ದೂರುದಾರರು ಫಿನಾಫ್ತಲೀನ್ ಲೇಪಿತ 10,000/- ರೂ.ಗಳ ಲಂಚದ ಹಣವನ್ನು ಎದುರುದಾರರಿಗೆ ನೀಡಿದ್ದು, ಅವರು ಲಂಚದ ಹಣ ಪಡೆದುಕೊಂಡು ಪ್ಯಾಂಟಿನ ಮುಂಭಾಗದ ಎಡಜೇಬಿನಲ್ಲಿ ಇಟ್ಟುಕೊಂಡಿರುತ್ತಾರೆ. ಆ ಕೂಡಲೇ ದೂರುದಾರರು ಎದುರುದಾರರ ಕಚೇರಿಯಿಂದ ಹೊರಬಂದು ತನಿಖಾಧಿಕಾರಿಗಳಿಗೆ ತಮ್ಮ ಕೈಯಿಂದ ತಲೆಯನ್ನು ಸವರಿಕೊಳ್ಳುವ ಮೂಲಕ ಸನ್ನೆ ಮಾಡಿರುತ್ತಾರೆ.

V. ಆ ಸಂದರ್ಭದಲ್ಲಿ ದೂರುದಾರರು ಸನ್ನೆ ಮಾಡಿದ ತಕ್ಷಣ ತನಿಖಾಧಿಕಾರಿಗಳು ಪಂಚರೊಂದಿಗೆ ಎದುರುದಾರರು ಇದ್ದ ಸ್ಥಳಕ್ಕೆ ಬಂದಾಗ, ದೂರುದಾರರು ಹಾಗೂ ನೆರಳು ಸಾಕ್ಷಿಯವರು ತನಿಖಾಧಿಕಾರಿಗಳಿಗೆ ನಡೆದ ವಿದ್ಯಾಮಾನವನ್ನು ತಿಳಿಸಿರುತ್ತಾರೆ. ನಂತರ ತನಿಖಾಧಿಕಾರಿಗಳು ಎದುರುದಾರರಿಗೆ ತಮ್ಮ ಗುರುತಿನ ಚೀಟಿ ತೋರಿಸಿ, ತಮ್ಮ ಪರಿಚಯ ಹೇಳಿ ಮತ್ತು ಅವರ ಪರಿಚಯ ಕೇಳಿ, ಅವರ ಮೇಲೆ ಭ್ರಷ್ಟಾಚಾರ ನಿಗ್ರಹ ಕಾಯ್ದೆ ಅಡಿಯಲ್ಲಿ ದೂರು ದಾಖಲಾಗಿರುವ ವಿಚಾರ ತಿಳಿಸಿ ಎದುರುದಾರರನ್ನು ತಮ್ಮ ವಶಕ್ಕೆ ಪಡೆದು, ತನಿಖೆಗೆ ಸಹಕರಿಸುವಂತೆ ತಿಳಿಸಿದ್ದು ಇರುತ್ತದೆ. ನಂತರ ತನಿಖಾಧಿಕಾರಿಗಳು ಎದುರುದಾರರಿಗೆ ಅವರ ಮೇಲಾಧಿಕಾರಿಗಳ ಬಗ್ಗೆ ವಿಚಾರಿಸಿದ್ದು, ಎದುರುದಾರರು ಮೇಲಾಧಿಕಾರಿ ರವೀಂದ್ರ ಕಿಣಿ, ಅಧೀಕ್ಷಕ ಇಂಜಿನಿಯರ್, ಪಂಚಾಯತ್‌ರಾಜ್ ಇಂಜಿನಿಯರ್ ಇಲಾಖೆ, ಮಂಗಳೂರು ಎಂದು ಅವರ ಮೊಬೈಲ್ ನಂ.9449599434 ನೀಡಿದ್ದು, ತನಿಖಾಧಿಕಾರಿಗಳು ಅವರನ್ನು ಮೊಬೈಲ್ ಮೂಲಕ ಕರೆ ಮಾಡಿ ಸದರಿ ಘಟನೆಯನ್ನು ತಿಳಿಸಿ, ತನಿಖೆಗೆ ಸಹಕರಿಸಲು ಬರುವಂತೆ ತಿಳಿಸಿದ್ದು, ಆಗ ಸದರಿಯವರು ತಾನು ಮಂಗಳೂರಿನಲ್ಲಿದ್ದು, ತನಗೆ ಬರಲು ಆಗುವುದಿಲ್ಲವೆಂದು ತಿಳಿಸಿ, ಕಚೇರಿಯ ಅಧೀಕ್ಷಕರಾದ ಎಮ್.ಜಿ. ಲೋಕೇಶ್‌ರವರಿಗೆ ತನಿಖೆಗೆ ಸಹಕರಿಸುವಂತೆ ಕರೆ ಮಾಡಿ ತಿಳಿಸಿರುತ್ತಾರೆ. ನಂತರ ತನಿಖಾಧಿಕಾರಿಗಳು ಎಮ್.ಜಿ. ಲೋಕೇಶ್‌ರವರ ಸಮಕ್ಷಮ ಸಿಬ್ಬಂದಿಯಿಂದ ಎರಡು ಪ್ರತ್ಯೇಕವಾದ ಬಟ್ಟಲುಗಳಲ್ಲಿ ಸೋಡಿಯಮ್ ಕಾರ್ಬೋನೇಟ್ ದ್ರಾವಣವನ್ನು ತಯಾರಿಸಿ ಎದುರುದಾರರ ಎರಡೂ ಕೈ ಬೆರಳುಗಳನ್ನು ಸೋಡಿಯಮ್ ಕಾರ್ಬೋನೇಟ್ ದ್ರಾವಣದಲ್ಲಿ ಪ್ರತ್ಯೇಕವಾಗಿ ತೊಳೆಸಲಾಗಿ, ದ್ರಾವಣವು ತಿಳಿ ಗುಲಾಬಿ ಬಣ್ಣಕ್ಕೆ ಬದಲಾವಣೆಯಾಗಿರುತ್ತದೆ. ನಂತರ ತನಿಖಾಧಿಕಾರಿಗಳು ಎದುರುದಾರರಿಗೆ ದೂರುದಾರರಿಂದ ಪಡೆದ ಲಂಚದ ಹಣವನ್ನು ಹಾಜರುಪಡಿಸಲು ತಿಳಿಸಿದಾಗ, ಎದುರುದಾರರು ತಮ್ಮ ಪ್ಯಾಂಟಿನ ಮುಂಭಾಗದ ಎಡಜೇಬಿನಲ್ಲಿ ಇಟ್ಟಿರುವುದಾಗಿ ತಿಳಿಸಿ, ಅದನ್ನು ಹೊರತೆಗೆದು ಹಾಜರುಪಡಿಸಿರುತ್ತಾರೆ. ಪಂಚ–2 ವಿಜಯ್

ಕುಮಾರ್‌ರವರು ತನಿಖಾಧಿಕಾರಿಗಳ ಸೂಚನೆಯಂತೆ ಅವುಗಳನ್ನು ಪರಿಶೀಲಿಸಲಾಗಿ, ಸದರಿ ನೋಟುಗಳು ಪ್ರಾಯೋಗಿಕ ಪಂಚನಾಮೆ ಕಾಲಕ್ಕೆ ನಮೂದಿಸಿದ ನೋಟುಗಳ ನಂಬರುಗಳಿಗೆ ಹಾಗೂ ಮೌಲ್ಯಕ್ಕೆ ಹೋಲಿಕೆಯಾಗಿರುತ್ತವೆ. ನಂತರ ತನಿಖಾಧಿಕಾರಿಗಳು ಸದರಿ ಲಂಚದ ಹಣದ ಬಗ್ಗೆ ಎದುರುದಾರರಲ್ಲಿ ವಿಚಾರಿಸಿದಾಗ, ಎದುರುದಾರರು ಸರಿಯಾದ, ತೃಪ್ತಿದಾಯಕವಾದ ಉತ್ತರ ಅಥವಾ ವಿವರಣೆ ಅಥವಾ ಲೆಕ್ಕ ನೀಡಿರುವುದಿಲ್ಲ. ಸದರಿ ಲಂಚದ ಹಣವನ್ನು ತನಿಖಾಧಿಕಾರಿಗಳು ಅಮಾನತ್ತುಪಡಿಸಿಕೊಂಡು ಕವರ್‌ನಲ್ಲಿ ಹಾಕಿ ಸೀಲ್ ಮಾಡಿರುತ್ತಾರೆ. ತನಿಖಾಧಿಕಾರಿಗಳು ಪಂಚ–ಬಸವರಾಜಪ್ಪರವರಿಂದ ಎದುರುದಾರರ ಅಂಗಶೋಧನೆ ಮಾಡಿಸಿದಾಗ, ಅವರ ಬಳಿ 2,75,790/– ಹಣ ಕಂಡುಬಂದಿದ್ದು, ಅವರ ಬಗ್ಗೆ ಸಮಂಜಸ ಉತ್ತರ ಕೊಡದೇ ಇದ್ದುದರಿಂದ ಆ ಹಣವನ್ನು ಅಮಾನತ್ತುಪಡಿಸಿಕೊಂಡು ಕವರ್‌ನಲ್ಲಿ ಹಾಕಿ ಸೀಲ್ ಮಾಡಿರುತ್ತಾರೆ. ಎದುರುದಾರರಿಗೆ ಮತ್ತೊಂದು ಪ್ಯಾಂಟಿನ ವ್ಯವಸ್ಥೆ ಮಾಡಿಸಿ, ಅವರು ಧರಿಸಿದ್ದ ಪ್ಯಾಂಟಿನ ಎಡಭಾಗದ ಜೇಬನ್ನು ಸೋಡಿಯಮ್ ಕಾರ್ಬೋನೇಟ್ ದ್ರಾವಣದಲ್ಲಿ ಪ್ರತ್ಯೇಕವಾಗಿ ತೊಳೆಸಲಾಗಿ, ದ್ರಾವಣವು ತಿಳಿ ಗುಲಾಬಿ ಬಣ್ಣಕ್ಕೆ ಬದಲಾವಣೆಯಾಗಿರುತ್ತದೆ. ಸದರಿ ಪ್ಯಾಂಟನ್ನು ಸಹಾ ಅಮಾನತ್ತುಪಡಿಸಿಕೊಂಡಿರುತ್ತಾರೆ. ನಂತರ ತನಿಖಾಧಿಕಾರಿಗಳು ದೂರುದಾರರಿಗೆ ವಾಯ್ಸ್ ರೆಕಾರ್ಡನ್ನು ಹಾಜರುಪಡಿಸಲು ತಿಳಿಸಿದಾಗ, ದೂರುದಾರರು ಅದನ್ನು ಹಾಜರುಪಡಿಸಿ, ತಾನು ಅವಸರದಲ್ಲಿ ಎದುರುದಾರರನ್ನು ಬೇಟಿಮಾಡಿದಾಗ, ವಾಯ್ಸ್ ರೆಕಾರ್ಡನ್ನು ಆನ್ ಮಾಡಿಕೊಳ್ಳಲು ಮರೆತುಬಿಟ್ಟೆ ಎಂದು ತಿಳಿಸಿರುತ್ತಾರೆ.

vi. ನಂತರ ತನಿಖಾಧಿಕಾರಿಗಳು ಎದುರುದಾರರಿಗೆ ದೂರುದಾರರಿಂದ ಪಡೆದ ಲಂಚದ ಹಣದ ಬಗ್ಗೆ ವಿವರಣೆಯನ್ನು ನೀಡುವಂತೆ ಸೂಚಿಸಿದಾಗ, ಎದುರುದಾರರು ತಮ್ಮ ಸಮಜಾಯಿಷಿಯನ್ನು ನೀಡಿದ್ದು, ಅದರಲ್ಲಿ "ನಾನು ಯಾವುದೇ ಲಂಚವನ್ನು ಕೊಡಿ ಎಂದು ಕೇಳಲಿಲ್ಲ, ಅವರೇ ಬಂದು ಬಲವಂತವಾಗಿ ನೀವು ನನ್ನ ಕೆಲಸ ಮೊದಲು ಮಾಡಿಕೊಟ್ಟಿರುತ್ತೀರಿ, ಅದರ ಬಗ್ಗೆ ಸ್ವಲ್ಪ ಗಿಫ್ಟ್ ಕೊಡುತ್ತೇನೆ ಎಂದು ಹೇಳಿದ, ನಾನು ಬೇಡ ಎಂದು ಹೇಳಿದರೂ ಅವರು ಟ್ರೇ ಪಕ್ಕದಲ್ಲಿ ಇಟ್ಟು ಹೊರಟುಹೋದರು. ಆಮೇಲೆ ಸಂಜೆ ಬಂದು ಚೆಕ್ ತೆಗೆದುಕೊಂಡು ಹೋಗುವಾಗ ನನಗೆ ಬಲವಂತವಾಗಿ ಹಣವನ್ನು ನೀಡಿ ಟ್ರ್ಯಾಪ್ ಮಾಡಿಸಿರುತ್ತಾರೆ. ನಾನು ಯಾರನ್ನು ಹಣವನ್ನು ಕೇಳುತ್ತಿರಲಿಲ್ಲ. ಆದರೂ ಸಹ ಅವರು ಬಲವಂತವಾಗಿ ಹಣ ನೀಡಿ ನನಗೆ ಅನಾವಶ್ಯಕವಾಗಿ ತೊಂದರೆ ಮಾಡಿದ್ದಾರೆ. ಹಾಗೂ ನನ್ನ ಹತ್ತಿರ ಮದುವೆಗೆ ಹಣ ಕೊಡಬೇಕಾದ್ದರಿಂದ ಕೈ ಸಾಲ ಪಡೆದ ಹಣವನ್ನು ನನ್ನ ಹತ್ತಿರ ಇಟ್ಟಿದ್ದೆ ಸ್ವಾಮಿ. ನಾನು ಯಾವುದೇ ಫೈಲ್‌ನ್ನು ತಡೆದು ಇಡುತ್ತಿರಲಿಲ್ಲ. ಅದರ ಬಗ್ಗೆ ಜನರ ಅಭಿಪ್ರಾಯ ಕೇಳಿ ತಿಳಿದುಕೊಳ್ಳಬಹುದು ಸ್ವಾಮಿ, ನನ್ನಲ್ಲಿ ಯಾವುದೇ ಕೆಟ್ಟ ಅಭಿಪ್ರಾಯ ಇರುವುದಿಲ್ಲವೆಂದು ಪ್ರಮಾಣೀಕರಿಸುತ್ತೇನೆ" ಎಂದು ಸಮಜಾಯಿಷಿಯನ್ನು ನೀಡಿರುತ್ತಾರೆ.

ಎದುರುದಾರರು ನೀಡಿದ ಸಮಜಾಯಿಷಿಯ ಬಗ್ಗೆ ತನಿಖಾಧಿಕಾರಿಗಳು ದೂರುದಾರರನ್ನು ಹಾಗೂ ಪಂಚರನ್ನು ವಿಚಾರಿಸಿದಾಗ, ಅವರುಗಳು ಅದಕ್ಕೆ ಒಪ್ಪಿರುವುದಿಲ್ಲ. ನಂತರ ತನಿಖಾಧಿಕಾರಿಗಳು ಎದುರುದಾರರು ದಿ:08/05/2019ರಂದು ದೂರುದಾರರೊಂದಿಗೆ ಮಾತನಾಡಿರುವ ಸಂಭಾಷಣೆಯನ್ನು ಕಚೇರಿಯ ಅಧೀಕ್ಷಕ ಲೋಕೇಶ್ ರವರಿಗೆ ಕೇಳಿಸಿದ್ದು, ಸಂಭಾಷಣೆಯಲ್ಲಿಯ ಒಂದು ಧ್ವನಿಯನ್ನು ಎದುರುದಾರರ ಧ್ವನಿಯೆಂದು ಗುರ್ತಿಸಿರುತ್ತಾರೆ. ತನಿಖಾಧಿಕಾರಿಗಳು ಕಚೇರಿಯ ಅಧೀಕ್ಷಕ ಲೋಕೇಶ್‌ರವರಿಗೆ ದೂರುದಾರರಿಗೆ ಸಂಬಂದಿಸಿದ ಕಡತವನ್ನು ಹಾಜರುಪಡಿಸಲು ತಿಳಿಸಿದಾಗ, ಲೋಕೇಶ್‌ರವರು ಸದರಿ ಕಡತವನ್ನು ಹಾಜರುಪಡಿಸಿದ್ದು, ಸದರಿ ದಾಖಲಾತಿಗಳನ್ನು ಜೆರಾಕ್ಸ್ ಮಾಡಿಸಿ ಅವುಗಳ ಮೇಲೆ ಪಂಚರ ಸಹಿ ಪಡೆದು, ಲೋಕೇಶ್‌ರವರ ಮೂಲಕ ಧೃಡೀಕರಿಸಿಕೊಂಡು ತನಿಖಾಧಿಕಾರಿಗಳು ತಮ್ಮ ವಶಕ್ಕೆ ಪಡೆದುಕೊಂಡಿರುತ್ತಾರೆ.

vii. ತನಿಖಾಧಿಕಾರಿಗಳು ಈ ಎಲ್ಲಾ ಪ್ರಕ್ರಿಯೆಗಳನ್ನು ತನಿಖಾಧಿಕಾರಿಗಳು ಹಂತ ಹಂತವಾಗಿ ಛಾಯಾಚಿತ್ರ ತೆಗೆಸಿರುತ್ತಾರೆ. ಈ ಎಲ್ಲಾ ಪ್ರಕ್ರಿಯೆಗಳನ್ನು ತನಿಖಾಧಿಕಾರಿಗಳು ದಿನಾಂಕ: 08/05/2019ರಂದು ಚಿಕ್ಕಮಗಳೂರು, ಪಂಚಾಯತ್ ರಾಜ್ ಇಂಜಿನಿಯರ್‌ರವರ ಉಪ-ವಿಭಾಗದ, ಕಾರ್ಯಪಾಲಕ ಇಂಜಿನಿಯರ್‌ರವರ ಕೊಠಡಿಯಲ್ಲಿ ಸಂಜೆ 06-15 ಗಂಟೆಯಿಂದ ರಾತ್ರಿ 11-00 ಗಂಟೆಯವರೆಗೆ ಟ್ರಾಪ್ ಪ್ರಕ್ರಿಯೆಯ ಕ್ರಮವನ್ನು ಜರುಗಿಸಿ ತಮ್ಮ ಸಿಬ್ಬಂದಿಗೆ ಉಕ್ತಲೇಖನ ನೀಡಿ ಲ್ಯಾಪ್ ಟಾಪ್ ಮೂಲಕ ಬೆರಳಚ್ಚು ಮಾಡಿಸಿರುತ್ತಾರೆ.

viii. ಆಗ ತನಿಖಾಧಿಕಾರಿಗಳು ಲಂಚದ ಹಣವನ್ನು ಜಪ್ತು ಮಾಡಿಕೊಂಡು ಪಂಚರ ಸಮಕ್ಷಮ ಪಂಚನಾಮೆ ಜರುಗಿಸಿರುತ್ತಾರೆ ಹಾಗೂ ಎದುರುದಾರವರನ್ನು ಅದೇ ಕಾರಣಕ್ಕಾಗಿ ದಸ್ತಗಿರಿ ಮಾಡಿರುತ್ತಾರೆ. ನಂತರ ತನಿಖಾಧಿಕಾರಿಗಳು ಮುಂದುವರಿದು, ದಿನಾಂಕ: 16/05/2019ರಂದು ಎದುರುದಾರರ ಮಾದರಿ ಧ್ವನಿ ಸಂಗ್ರಹಿಸುವ ಅವಶ್ಯಕತೆಯಿದ್ದು, ಸರ್ಕಾರಿ ಪಂಚರುಗಳಾದ 1) ಶ್ರೀ. ಬಸವರಾಜಪ್ಪ ಡಿ. 2) ಶ್ರೀ ವಿಜಯಕುಮಾರ್, ಇವರುಗಳನ್ನು ಚಿಕ್ಕಮಗಳೂರು ಎಸಿಬಿ ಕಚೇರಿಗೆ ಬರಮಾಡಿಕೊಂಡಿದ್ದು, ಅವರ ಸಮಕ್ಷಮ ಟ್ರ್ಯಾಪ್ ಪೂರ್ವದಲ್ಲಿ ಅಂದರೆ ದಿ:08/05/2019ರಂದು ಎದುರುದಾರರೊಂದಿಗೆ ದೂರುದಾರರು ನಡೆಸಿದ ಸಂಭಾಷಣೆಯನ್ನು ಓದಲು ಪ್ರತಿಲೇಖವನ್ನು ತಯಾರಿಸಿದ್ದು, ಅದನ್ನು ಎದುರುದಾರರಿಂದ ಆರು ಬಾರಿ ಓದಿಸಿ, ವಾಯ್ಸ್ ರೆಕಾರ್ಡ್‌ನಲ್ಲಿ ರೆಕಾರ್ಡ್ ಮಾಡಿಕೊಂಡಿದ್ದು, ಅದನ್ನು ಲ್ಯಾಪ್ ಟಾಪ್‌ಗೆ ಡೌನ್ ಲೋಡ್ ಮಾಡಿಕೊಂಡು ಪ್ರತ್ಯೇಕ ಸಿಡಿಗಳನ್ನು ತಯಾರಿಸಿರುತ್ತಾರೆ. ನಂತರ ತನಿಖಾಧಿಕಾರಿಗಳು ಸದರಿ ಪಂಚನಾಮೆಯನ್ನು ಪಂಚರ ಸಮಕ್ಷಮ ಮಧ್ಯಾಹ್ನ 12-50 ಗಂಟೆಯಿಂದ 13-45 ಗಂಟೆಯವರೆಗೆ ಚಿಕ್ಕಮಗಳೂರು ಎಸಿಬಿ ಕಚೇರಿಯಲ್ಲಿ ಜರುಗಿಸಿರುತ್ತಾರೆ.

ix. ಸಿಡಿಗಳಲ್ಲಿ ದಾಖಲಾದ ಸಂಭಾಷಣೆ ದೂರುದಾರರ ಹಾಗೂ ಎದುರುದಾರರ ಮಾದರಿ ಧ್ವನಿಗೆ ಹೋಲಿಕೆ ಆಗುತ್ತದೆ ಎಂಬುದು ವಿಧಿ ವಿಜ್ಞಾನ ಪ್ರಯೋಗಾಲಯದ ವರದಿಯಿಂದ ಕಂಡುಬರುತ್ತದೆ. ಎದುರುದಾರರ ಎರಡೂ ಕೈಬೆರಳುಗಳನ್ನು ತೊಳೆಯಿಸಿದ ಸೋಡಿಯಮ್ ಕಾರ್ಬೋನೇಟ್ ದ್ರಾವಣದಲ್ಲಿ ಫಿನಾಪ್ತೀಲೀನ್ ಅಂಶವು ಪತ್ತೆಯಾಗಿರುವುದು ರಾಸಾಯನಿಕ ತಜ್ಞರ ಪರೀಕ್ಷಾ ವರದಿಯಿಂದ ಧೃಢಪಟ್ಟಿರುತ್ತದೆ. ಎದುರುದಾರರ ಲಂಚದ ಹಣ 10,000/- ರೂ. ಇಟ್ಟಿದ್ದ ಪ್ಯಾಂಟ್‌ನಲ್ಲಿ ಫಿನಾಪ್ತೀಲೀನ್ ಅಂಶವು ಪತ್ತೆಯಾಗಿರುವುದು ರಾಸಾಯನಿಕ ತಜ್ಞರ ಪರೀಕ್ಷಾ ವರದಿಯಿಂದ ಧೃಢಪಟ್ಟಿರುತ್ತದೆ. ತನಿಖಾಧಿಕಾರಿಗಳು ಎದುರುದಾರರನ್ನು ಸೇವೆಯಿಂದ ವಜಾ ಮಾಡಲು ಅಧಿಕಾರ ಹೊಂದಿದ ಪ್ರಾಧಿಕಾರದಿಂದ ಎದುರುದಾರರನ್ನು ಅಭಿಯೋಜನೆಗೊಳಿಸಲು ಮಂಜೂರಾತಿ ಆದೇಶ ಪಡೆದುಕೊಂಡಿರುತ್ತಾರೆ.

x. ಸಾಕ್ಷಿದಾರರ ಹೇಳಿಕೆಗಳು, ದೂರು ಅರ್ಜಿ, ತನಿಖಾಧಿಕಾರಿ ಸಂಗ್ರಹಿಸಿದ ದಾಖಲೆ, ರಾಸಾಯನಿಕ ತಜ್ಞರ ವರದಿ, ಧ್ವನಿ ವಿಶ್ಲೇಷಣಾ ವರದಿ, ಇವುಗಳನ್ನು ಪರಿಶೀಲಿಸಿದಾಗ, ಎದುರುದಾರರು ಸರ್ಕಾರಿ/ಸಾರ್ವಜನಿಕ ನೌಕರರಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡು ಕರ್ತವ್ಯದಲ್ಲಿ ಸಂಪೂರ್ಣ ನಿಷ್ಠೆ ತೋರಿಸದೆ, ಭ್ರಷ್ಟಾಚಾರವೆಸಗಿ, ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮಗಳು 1966 ರ ನಿಯಮ 3 (1) (i) ರಿಂದ (iii) ರನ್ವಯ ದುರ್ನಡತೆಯನ್ನು ಎಸಗಿರುವುದು ಮೇಲ್ನೋಟಕ್ಕೆ ಕಂಡುಬಂದಿರುತ್ತದೆ.

xi. ತನಿಖಾ ವರದಿಯ ವಿವರಗಳನ್ನು ಪರಿಶೀಲಿಸಲಾಗಿ, ಎದುರುದಾರರು ಕರ್ನಾಟಕ ಲೋಕಾಯುಕ್ತ ಕಾಯಿದೆ, 1984 ಕಲಂ 2(6)ರ ಪ್ರಕಾರ ಸರ್ಕಾರಿ ನೌಕರರಾಗಿದ್ದು, ಅದೇ ಅಧಿನಿಯಮದ 2(2)ರಂತೆ ಕರ್ತವ್ಯ ದುರುಪಯೋಗ ಪಡಿಸಿಕೊಂಡು ತಮ್ಮ ಸ್ವಲಾಭಕ್ಕಾಗಿ ಭ್ರಷ್ಟಾಚಾರ ಎಸಗಿ ಶಿಸ್ತು ಕ್ರಮಕ್ಕೆ ಒಳಪಡಿಸಲು ಅರ್ಹರಾಗಿರುವುದು ಕಂಡು ಬರುತ್ತದೆ.

2) ಮೇಲೆ ಹೇಳಿದ ಕಾರಣಕ್ಕಾಗಿ ಎದುರುದಾರರ ಮೇಲೆ ಶಿಸ್ತು ಕ್ರಮಕ್ಕಾಗಿ ಇಲಾಖಾ ವಿಚಾರಣೆ ನಡೆಸಲು ಸಂಬಂಧ ಪಟ್ಟ ಪ್ರಾಧಿಕಾರಕ್ಕೆ ಏಕೆ ಶಿಫಾರಸ್ಸು ಮಾಡಬಾರದು ಎನ್ನುವ ಬಗ್ಗೆ, ಎದುರುದಾರರಿಂದ ಕಾರಣ ಪಡೆಯಲು ಪರಿವೀಕ್ಷಣಾ ಟಿಪ್ಪಣಿಯನ್ನು ಎದುರುದಾರರಿಗೆ ಕಳುಹಿಸಲಾಗಿ, ಎದುರುದಾರರು ಪರಿವೀಕ್ಷಣಾ ಟಿಪ್ಪಣಿಗೆ ತಮ್ಮ ಉತ್ತರವನ್ನು ದಿನಾಂಕ: 26/10/2021 ರಂದು ಸಲ್ಲಿಸಿರುತ್ತಾರೆ. ಸದರಿ ಸಮಜಾಯಿಷಿಯನ್ನು ಪರಿಶೀಲಿಸಲಾಗಿ, ಎದುರುದಾರರು ಆಪಾದನೆಗಳನ್ನು ನಿರಾಕರಿಸಿರುವುದರ ಹೊರತಾಗಿ, ಆಪಾದನೆಗಳನ್ನು ಅಲ್ಲಗಳೆಯಲು ಯಾವುದೇ ಪೂರಕ ದಾಖಲಾತಿಗಳನ್ನು ಸಲ್ಲಿಸಿರುವುದಿಲ್ಲ. ಎದುರುದಾರರು ತಮ್ಮ ಸಮಜಾಯಿಷಿಯಲ್ಲಿ "ತಾನು ದೂರುದಾರರಿಗೆ ರೂ. 20,000/- ಲಂಚದ ಹಣಕ್ಕೆ ಬೇಡಿಕೆ ಇಟ್ಟಿಲ್ಲ ಮತ್ತು ಅವರಿಂದ ತಾನು ರೂ. 10,000/- ಲಂಚದ

ಹಣವನ್ನು ಅವರ ಬಿಲ್ ಪಾಸ್ ಮಾಡಲು ತೆಗೆದುಕೊಂಡಿರುವುದಿಲ್ಲ. ದಿನಾಂಕ:08/05/2019ರಂದು ದೂರುದಾರರು ತನ್ನ 8-ಲಕ್ಷ ರೂ.ಗಳ ಬಿಲ್ ಪಾಸ್‌ಮಾಡಲು ಭೇಡಿ ಮಾಡಿಲ್ಲ, ಹಾಗು ತಾನು 20,000/- ರೂ. ಲಂಚದ ಹಣಕ್ಕೆ ಬೇಡಿಕೆ ಇಟ್ಟು 10,000/- ರೂ. ಪಡೆದು ಬಾಕಿ 10,000/- ರೂ. ಟ್ರ್ಯಾಪ್ ಸಮಯದಲ್ಲಿ ಪಡೆದಿದ್ದೇನೆ ಎನ್ನುವುದು ಸುಳ್ಳು. ದೂರುದಾರರು ತನ್ನ ಟೇಬಲ್ ಮೇಲಿನ ಟ್ರೇ ಹತ್ತಿರ ಬಲವಂತವಾಗಿ ಅದು ತನ್ನ ಉಡುಗೊರೆ ಅಂತಾ ಹಣವನ್ನು ಇಟ್ಟ ಎಂದು ತಿಳಿಸಿರುತ್ತಾರೆ. ತನ್ನ ಮೇಲೆ ಎಸಿಬಿ ಪೋಲೀಸರು ಸುಳ್ಳು ಮೊಕದ್ದಮೆ ದಾಖಲಿಸಿ, ದಾಖಲೆಗಳನ್ನು ಸೃಷ್ಠಿಸಿ, ತನ್ನನ್ನು ಬಂಧಿಸಿ ನ್ಯಾಯಾಂಗ ಬಂಧನಕ್ಕೆ ಕಳುಹಿಸಿರುತ್ತಾರೆ. ದೂರುದಾರರು ತನಗೆ ಆಗದವರ ಮಾತು ಕೇಳಿ ತನಗೆ ತೊಂದರೆ ಕೊಡಲು ತನ್ನನ್ನು ಪ್ರಕರಣದಲ್ಲಿ ಸಿಕ್ಕಿಸಿದ್ದಾರೆ, ತಾನು ಲಂಚದ ಹಣ ಡಿಮ್ಯಾಂಡ್ ಮಾಡದೇ ಇರುವುದರಿಂದ ತನ್ನ ಧ್ವನಿಯನ್ನು ರೆಕಾರ್ಡ್ ಮಾಡುವ ಪ್ರಶ್ನೆ ಇರುವುದಿಲ್ಲ ಅಂತಾ ತಿಳಿಸಿರುತ್ತಾರೆ ಮತ್ತು ತಾನು ಯಾವುದೇ ದುರ್ನಡತೆ ಎಸಗಿ ಸಾರ್ವಜನಿಕ ನೌಕರರಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡಿರುವುದಿಲ್ಲ, ಕಾರಣ ತನ್ನ ಮೇಲೆ ನಡೆಸಲು ಉದ್ದೇಶಿಸಿರುವ ಇಲಾಖಾ ವಿಚಾರಣೆಯನ್ನು ಕೈಬಿಡಬೇಕೆಂದು ವಿನಂತಿಸಿಕೊಂಡಿರುತ್ತಾರೆ." ಎಂದು ಮುಂತಾಗಿ ಸಮಜಾಯಿಷಿಯನ್ನು ನೀಡಿರುತ್ತಾರೆ.

3) ಎದುರುದಾರರು ಸಲ್ಲಿಸಿರುವ ಸಮಜಾಯಿಷಿಯನ್ನು ತನಿಖಾ ಕಾಲದಲ್ಲಿ ಸಂಗ್ರಹಿಸಲಾದ, ದಾಖಲಾತಿಗಳು ಮತ್ತು ಹೇಳಿಕೆಗಳೊಂದಿಗೆ ಪರಿಶೀಲಿಸಲಾಗಿದ್ದು, ಎದುರುದಾರರು ದೂರುದಾರರಿಂದ ಲಂಚದ ಹಣವನ್ನು ಕೇಳಿ ಪಡೆದುಕೊಂಡಿರುವುದು ಕಂಡುಬರುತ್ತದೆ. ಎದುರುದಾರರು ನೀಡಿರುವ ಉತ್ತರದಲ್ಲಿ ಅವರ ವಿರುದ್ಧದ ನಡವಳಿಯನ್ನು ಕೈಬಿಡಲು ಸೂಕ್ತ/ಸಮಂಜಸ/ಸಮಾಧಾನಕರ ಕಾರಣ ತೋರಿಸಿಲ್ಲವೆಂಬ ಅಭಿಪ್ರಾಯಕ್ಕೆ ಬರಲಾಗಿದೆ.

4) ಕಡತದಲ್ಲಿಯ ಸಂಗತಿಗಳು ಹಾಗೂ ದಾಖಲಾತಿಗಳಿಂದ, ಎದುರುದಾರರು ಫಿರ್ಯಾದುದಾರರಿಂದ ಲಂಚದ ಹಣವನ್ನು ಪಡೆದುಕೊಂಡಿದ್ದು, ತನ್ಮೂಲಕ ಎದುರುದಾರರು ಸರ್ಕಾರಿ/ಸಾರ್ವಜನಿಕ ನೌಕರರಾಗಿ ಪರಿಪೂರ್ಣ ಪ್ರಾಮಾಣಿಕತೆ ಸಂಪೂರ್ಣ ಕರ್ತವ್ಯ ನಿಷ್ಠತೆ ಮತ್ತು ಸರ್ಕಾರಿ ಸೇವಕರಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡ ದುರ್ವರ್ತನೆ/ದುರ್ನಡತೆ ಎಸಗಿರುವುದು ಮೇಲ್ನೋಟಕ್ಕೆ ಕಂಡುಬರುತ್ತದೆ.

5) ಅದಲ್ಲದೆ ಎದುರುದಾರರು ಸರ್ಕಾರಿ ನೌಕರರಾಗಿದ್ದು, ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮಾವಳಿ, 1966ರ ನಿಯಮ 3(1) ರ ಅಡಿಯಲ್ಲಿ ದುರ್ವರ್ತನೆ/ದುರ್ನಡತೆ ಕಂಡುಬರುವುದರಿಂದ, ಸದರಿಯವರ ವಿರುದ್ಧ ಇಲಾಖಾ ಶಿಸ್ತು ಕ್ರಮ ಕೈಗೊಳ್ಳಲು ಕರ್ನಾಟಕ ಲೋಕಾಯುಕ್ತ ಕಾಯಿದೆ, 1984 ಕಲಂ 12(3) ರ ಅಡಿ ಪ್ರದತ್ತವಾದ ಅಧಿಕಾರದಡಿ, ಈಗ ಈ ವರದಿ ಮೂಲಕ ಸಕ್ಷಮ ಪ್ರಾಧಿಕಾರಕ್ಕೆ ಶಿಫಾರಸ್ಸು ಮಾಡಲಾಗುತ್ತಿದೆ ಹಾಗೂ ಎದುರುದಾರರ ವಿರುದ್ಧದ ಇಲಾಖಾ ವಿಚಾರಣೆ ಮಾಡಲು, ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿ 1957ರ ನಿಯಮ 14(ಎ)ರಡಿ ಈ ಸಂಸ್ಥೆಗೆ ವಹಿಸಬೇಕೆಂದು ಕೋರಿದೆ.

6) ಹಾಗೆಯೇ ಕರ್ನಾಟಕ ಲೋಕಾಯುಕ್ತ ಕಾಯಿದೆ, 1984 ಕಲಂ 12(4) ರ ಪ್ರಕಾರ ಸಕ್ಷಮ ಪ್ರಾಧಿಕಾರವು, ಈ ವರದಿಯ ಮೇಲೆ ಏನು ಕ್ರಮ ಕೈಗೊಂಡಿದೆ ಅಥವಾ ಏನು ಕ್ರಮ ಕೈಗೊಳ್ಳಲಾಗುತ್ತದೆ ಎಂಬುದರ ಬಗ್ಗೆ ಈ ವರದಿಯನ್ನು ಸ್ವೀಕರಿಸಿದ **ಮೂರು ತಿಂಗಳೊಳಗೆ** ಈ ಪ್ರಾಧಿಕಾರಕ್ಕೆ ತಿಳಿಸಲು ಹೇಳಿದೆ.

14/2

(ನ್ಯಾಯಮೂರ್ತಿ ಬಿ.ಎಸ್. ಪಾಟೀಲ್)
ಉಪಲೋಕಾಯುಕ್ತರು-2
ಕರ್ನಾಟಕ ರಾಜ್ಯ, ಬೆಂಗಳೂರು.